ಅವತ್ತು ಅಜ್ಜಿಯ ಕೈಯಲ್ಲಿ ಹತ್ತಿಬಿತ್ತಿಸಿದ.

ಕಾಫಿ ಕುಡಿದ ಕರಿಅಜ್ಜ ಇಸ್ಪೀಟಾಟಕ್ಕೆ ಹೊರಟ. ಮಾವಿನಕೆರೆ ಸೀತಾರಾಮಯ್ಯ, ಮಾಧವಪೈ, ವರ್ಧಮಾನ ಹೆಗ್ಗಡೆ ಇನ್ನೂ ಯಾರ್‍ಯಾರೋ ಕರಿಅಜ್ಜನ ಮನೆಯಲ್ಲಿ ಸೇರುತ್ತಿದ್ದರು. ಒಮ್ಮೊಮ್ಮೆ ಇಸ್ಪೀಟಾಟವಿಲ್ಲದ ದಿವಸ. ಕರಿಅಜ್ಜ ಶ್ರೀನಿವಾಸಯ್ಯನವರ ಮನೆಗೆ ಹೋಗುತ್ತಿದ್ದ. ಅವತ್ತು ರಾತ್ರಿ ಹತ್ತುಗಂಟೆಯಾದರೂ ಕರಿಅಜ್ಜ ಬರಲಿಲ್ಲವಾದ್ದರಿಂದ ಅವನನ್ನು ಕರೆದು ಬರಲಿಕ್ಕೆ ಅಜ್ಜಿ ಹೇಳಿದಳು. ಚಂದ್ರು ಇಸ್ಪೀಟು ಕ್ಲಬ್ಬಿಗೆ ಹೋಗಿ, ಅಲ್ಲಿಂದ ಶ್ರೀನಿವಾಸಯ್ಯನವರ ಮನೆಗೆ ಹೋದ. ಚಂದ್ರು ಬಂದದ್ದನ್ನು ನೋಡಿ ಕರಿಅಜ್ಜ ಹೊರಟು ನಿಂತ. ಅಲ್ಲಿಂದ ಬರುವಾಗ ಬೆಣಚುಕಲ್ಲಿನ ಉಬ್ಬುತಗ್ಗಿನ ಹಾದಿಯಲ್ಲಿ ಕರಿಅಜ್ಜನ ಟಾರ್ಚಿನ ಬೆಳಕಿನಲ್ಲಿ ಚಂದ್ರು ನಡೆದು ಬರುತ್ತಿದ್ದ. ಅವರು ಪೋಸ್ಟಾಫೀಸ್ ಹತ್ತಿರ ಬಂದಾಗ ಚಂದ್ರು 'ಕರಿಅಜ್ಜ' ಎಂದ.

'ಏನೋ?'

'ದೇವಸ್ಥಾನದ ಅಜ್ಜ ಮನೇಗೆ ಸಾಮಾನು ತರ್ಲಿಕ್ಕೆ ಹೇಳಿದ.'

'ನಾನಲ್ಲದೆ ಮತ್ಯಾರು, ಅವರಪ್ಪ ತರ್‍ತಾರೇನು? ನನ್ನ ಭತ್ತ ಅಲ್ಲೆ ಪಣತದಲ್ಲಿ ಬಿಟ್ಟಿರ್‍ತೀನಿ. ಎಷ್ಟು ಕದೀತಾನೊ. ಎರಡು ಎಮ್ಮೆ ತಂದು ಕಟ್ಟಿದೀನಿ. ಕಾಡಿನಿಂದ ವರ್ಷಕ್ಕಾಗೋ ಕಟ್ಟಿಗೆ ತರಿಸ್ತೀನಿ, ಇದ್ದಿನಬ್ಯಾರಿ ಅಂಗಡೀಲಿ ಲೆಕ್ಕ ಬರ್‍ಸಿ ನೀನೇ ಸಾಮಾನು ತರ್‍ತೀಯೋ ಇಲ್ಲೊ? ನಿಮ್ಮ ಬಿಳಿಅಜ್ಜನಿಗೆ ತಲೆಕೆಟ್ಟಾ ಇದೆ ಅಂತ ಕಾಣುತ್ತೆ' ಎಂದು ಕರಿಅಜ್ಜ ದಾಪುಗಾಲು ಹಾಕಲಿಕ್ಕೆ ಪ್ರಾರಂಭಿಸಿದ.

ಆ ಕತ್ತಲಿನಲ್ಲಿ ಟಾರ್ಚಿನ ಬೆಳಕಿನಲ್ಲಿ ಕಪ್ಪಗೆ ಬ್ರಹ್ಮರಾಕ್ಷಸನ ಹಾಗೆ ನಡೆಯುತ್ತ ಇನ್ನಷ್ಟು ಕಪ್ಪಾಗಿ ಕಾಣುತ್ತಿದ್ದ ಕರಿಅಜ್ಜನಿಗೆ ದೆವ್ವಗಳೂ ಹೆದರುತ್ತವೆ ಎಂದುಕೊಂಡ ಚಂದ್ರುವಿಗೆ ಮೈಮೇಲೆ ದೆಯ್ಯಬಂದ ಪಾತ್ರಿ ಕರಿಅಜ್ಜನನ್ನು ಗೌರವದಿಂದ ಮಾತಾಡಿಸಿದ್ದು ನೆನಪಾಯಿತು. ಮನೆಮುಟ್ಟಿದಾಗ ಬಿಳಿಅಜ್ಜ ಮುಸುಗೆಳೆದು ಮಲಗಿದ್ದ. ಕರಿಅಜ್ಜ ಕಿರುಜಗಲಿಯಲ್ಲಿ ತನ್ನ ಮಂಚದ ಮೇಲೆ ಕುಳಿತುಕೊಂಡ. 'ಒಳಗೆ ಬರ್ಲಿಕ್ಕೇಳೋ' ಎಂದು ಬಾಗಿಲಿನಲ್ಲಿ ನಿಂತಿದ್ದ ಅಜ್ಜಿ ಚಂದ್ರುವಿಗೆ ಹೇಳಿದಳು. 'ನಂಗೇನೂ ಬೇಡ ಅನ್ನು' ಎಂದು ಚಂದ್ರುವಿಗೆ ಕರಿಅಜ್ಜ ಹೇಳಿದ. ಕರಿಅಜ್ಜ ಬಂದದ್ದನ್ನು ಗಮನಿಸಿದ ಎತ್ತುಗಳು ಕೊಟ್ಟಿಗೆಯಲ್ಲಿ ಕಟ್ಟಿದಲ್ಲಿಯೇ ಅತ್ತಿತ್ತ ಓಡಾಡಿದವು. ಎತ್ತುಗಳ ಮೈಗಳನ್ನು ತಡವರಿಸಿ ಬಂದ ಕರಿಅಜ್ಜ ಸೊಳ್ಳೆಪರದೆಯನ್ನು ಹರಡಿಕೊಂಡು ಒಳಗೆ ಸೇರಿದ. ಹತ್ತಿರ ಹೋಗಿ ಅಜ್ಜಿ 'ಅಯ್ಯೊ ಬನ್ನೀಂದ್ರೆ' ಎಂದು ಕರಿಅಜ್ಜನನ್ನು ಕರೆದಳು.

'ಬ್ಯಾಡಾ ಅಂತ ಒಂದ್ಸಾರಿ ಹೇಳಿದ್ರೆ ಗೊತ್ತಾಗೋಲ್ಲೇನು?' ಎಂದು ಕರಿಅಜ್ಜ ಗದರುದನಿಯಲ್ಲಿ ಹೇಳಿದಾಗ ಅಜ್ಜಿ ಸುಮ್ಮನೆ ಹೋದಳು.

ಸ್ವಲ್ಪ ಹೊತ್ತಿನಲ್ಲಿ ಎಲ್ಲರಿಗೂ ನಿದ್ದೆ ಬಂದ ಹಾಗಿತ್ತು. ಸುತ್ತಮುತ್ತಲ ಗಿಡಮರಗಳಲ್ಲಿದ್ದ ದೊಡ್ಡನೊಣಗಳು ಮಿಟರ್ ಮಿಟರ್ ಎಂದು ಚೀರುತ್ತಿದ್ದವು. ರಸ್ತೆಯ ಮೇಲೆ ಬೀದಿನಾಯಿಗಳು ಊಳುತ್ತಿದ್ದವು. ಇದ್ದಕ್ಕಿದ್ದ ಹಾಗೇ ಚಂದ್ರುವಿನ ಕಣ್ಣೆದುರಿಗೇ ಕರಿಅಜ್ಜ ಎದ್ದು ಬಿಳಿಅಜ್ಜನ ಕುತ್ತಿಗೆ ಹಿಚುಕುವಂತೆ ಕಂಡು ಅವನು ಚೀರಿದ. 'ಏನಾಯ್ತೊ ಚಂದ್ರು?' ಎಂದು ಕರಿಅಜ್ಜ, ಬಿಳಿಅಜ್ಜ ಮತ್ತು ಅಜ್ಜಿ ಒಟ್ಟಿಗೇ ಕೇಳಿದರು. 'ದೆವ್ವ ಅಜ್ಜ' ಎಂದ ಚಂದ್ರು.

'ದೆವ್ವಾನೂ ಇಲ್ಲ ಗಿವ್ವಾನೂ ಇಲ್ಲ. ನಾನಿರಬೇಕಾದ್ರೆ ಯಾವ ದೆವ್ವಾನೂ ಬರೋಲ್ಲ' ಎಂದ